ಹೆಚ್ಚಿಗೆ ಹೇಳಿರುವಂಥದ್ದು. ನೀವು convince ಆಗಲಿ ಎಂದು ಹೇಳಿರುತ್ತೇನೆ. ಅವರು ಯಾವತ್ತೂ convince ಆಗುವುದಿಲ್ಲ. Government is not goint to be convinced.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಹಾಗೂ ಇತರರು ಈ ದಿನ ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 60 ಮೇಲೆ ನಿಲುವಳಿ ಸೂಚನೆಯನ್ನು ತಂದಿರುತ್ತಾರೆ. ಸದರಿ ನಿಯಮಾವಳಿಗಳ ನಿಯಮ 62ರ ಮೇರೆಗೆ ಸೂಚನೆಯು ನಿರ್ದಿಷ್ಟವಾದ ವಿಷಯದ ಮೇಲೆ ಸೀಮಿತವಾಗಿರಬೇಕು. ಆದರೆ ಮೇಲಿನ ಸೂಚನೆಗಳನ್ನು ಗಮನಿಸಿದಾಗ ಲೋಕಾಯುಕ್ತರ ರಾಜೀನಾಮೆ, ಗಣಿಗಾರಿಕೆಯಲ್ಲಿ ಅಕ್ರಮ ಮತ್ತು ನೆರೆಸಂತ್ರಸ್ತರಿಗೆ ಪರಿಹಾರದಲ್ಲಿ ತಾರತಮ್ಯ ಬಗ್ಗೆ ಲೋಕಾಯುಕ್ತರಿಂದ ತನಿಖೆ ಇತ್ಯಾದಿಗಳೂ ಸೇರಿದೆ. ಇಲ್ಲಿ ಪ್ರಸ್ತಾಪಿಸಿರುವ ವಿಷಯಗಳು ಆಡಳಿತಾತ್ಮಕ ವಿಷಯಗಳು ಕೂಡ ಆಗಿರುತ್ತವೆ. ಈಗ ಇವುಗಳು ಸದನದ ಮುಂದೆ ಬರಲಿರುವ ಬೇಡಿಕೆಗಳ ಮೇಲಿನ ಚರ್ಚೆಯ ಸಂದರ್ಭದಲ್ಲಿಯೂ ಪ್ರಸ್ತಾಪಿಸಲು ಸಾಕಷ್ಟು ಅವಕಾಶಗಳು ಇವೆ.

2 ಪಿ. ಎಂ.

ಅಲ್ಲದೆ ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ವಿಷಯ ನಿಯಮಾವಳಿ 60ರ ವ್ಯಾಪ್ತಿಗೆ ಬರುವುದಿಲ್ಲವೆಂಬ ಅಂಶವನ್ನು ಸದನದ ಗಮನಕ್ಕೆ ತಂದಿರುತ್ತಾರೆ. ಆದರೂ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಪ್ರಾರಂಭಿಕವಾಗಿ ಪ್ರಸ್ತಾಪಿಸಲು ಅನುಮತಿಯನ್ನು ನೀಡಿದೆ. ಈಗಾಗಲೇ ತಿಳಿಸಿದಂತೆ ಸೂಚನೆಯನ್ನು ನಿಲುವಳಿ ಸೂಚನೆಯಲ್ಲಿ ಪರಿಗಣಿಸಲು ಸಾಧ್ಯವಾಗದೆ ಇರುವುದರಿಂದ ನಿಲುವಳಿ ಸೂಚನೆಯನ್ನು ತಿರಸ್ಕರಿಸದೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ತಾಳಿ.

ಅಧ್ಯಕ್ಷರು: ಈ ವಿಷಯದ ಬಗ್ಗೆ ಪ್ರಾಮುಖ್ಯತೆಯನ್ನು ಪರಿಗಣಿಸಿ ನಿಯಮ 69ರ ಅಡಿಯಲ್ಲಿ ಈ ಕೂಡಲೆ ಚರ್ಚಿಸಲು ಅನುಮತಿಯನ್ನು ನೀಡಿರುತ್ತೇನೆ.